


ಚಿಗುರು ಎಂಬ ಕಾಡು. ಅಲ್ಲಿ ರಸಪುರಿ ಎಂಬ ಮಾವಿನ ಮರ. ಆ ಮರದಲ್ಲಿ ಗಾನಾ ಎಂಬ ಕೋಗಿಲೆ. ಅಶಕ್ತರನ್ನು ಕಂಡರೆ ಮರಗುತ್ತಿತ್ತು. ಅದರ ಮಾತೇ ಸಂಗೀತ, ನುಡಿ ಮಧುರ, ಹಾಡು ಮಂಜುಳಗಾನ. ಅದರ ಅಕ್ಕ ಪಕ್ಕದ ಗೂಡುಗಳಲ್ಲಿ ಚಿಕ್ಕ ಚಿಕ್ಕ ಮರಿಗಳಿದ್ದವು. ಅವುಗಳಿಗೆ ಚಿಗುರಿನ ರಸ ಕುಡಿಸುತ್ತಿತ್ತು ಈ ಕೋಗಿಲೆ.

ಹೀಗಿರಲು ಒಂದು ದಿನ ಒಂದು ಕೆಂಬೂತ ಬೆಂಕಿಯ ಕಿಡಿ ಸಿಡಿದು ನೋವಿನಿಂದ ಚೀರುತ್ತಿತ್ತು. ಕೋಗಿಲೆಯ ಮನ ಕರಗಿತು. ಅದನ್ನು ಗೂಡಿಗೆ ಕರೆತಂದು ಸುಟ್ಟಗಾಯಕ್ಕೆ ಔಷಧಿ ಹಚ್ಚಿ ಉಪಚರಿಸಿತು. ತನ್ನ ಮೊಟ್ಟೆಗಳನ್ನು ನೋಡಿಕೊಳ್ಳಲು ತಿಳಿಸಿ ಹಾರಿ ಹೋಯಿತು. ಮರಳಿ ಆಹಾರ ತಂದಾಗ, ಗೂಡಿನ ಬಾಗಿಲು ಮುರಿದು ಬಿದ್ದಿತ್ತು. ಮೊಟ್ಟೆಗಳನ್ನು ತುಳಿದು ಒಡೆದು ಹಾಕಿ ಕೆಂಬೂತ ಹಾರಿ ಹೋಗಿತ್ತು.

ಕಣ್ಣೀರು ಹಾಕಿದ ಕೋಗಿಲೆ ಕೆಲವು ದಿನ ಕಳೆಯಲು ಮರದ ಆಯಕಟ್ಟಿನಲ್ಲಿ ಮತ್ತೆ ಗೂಡು ಕಟ್ಟಿ ಮೊಟ್ಟೆ ಇಟ್ಟು ಸಂಭ್ರಮಿಸಿತು. ಆಗ ಎದುರಿಗೆ ಗೀಜಗ ಬಂದು, 'ನನ್ನ ಗಂಡ ಗೂಡು ಕಟ್ಟುವೆನೆಂದು ಹೋದವ ಬಂದಿಲ್ಲ. ಈಗ ಮೊಟ್ಟೆ ಇಡಬೇಕು. ಜಾಗ ಕೊಡು' ಎಂದು ಹಲಬಿತು. ಅದಕ್ಕೆ ಜಾಗ ಕೊಟ್ಟ ಕೋಗಿಲೆ ಮತ್ತೆ ಕಾಳು ಹುಡುಕಲು ಹಾರಿ ಹೋಯಿತು. ಮರಳಿ ಬಂದಾಗ, ಗಂಡು ಗೀಜಗ ಬಂದಿತ್ತು. ಕೋಗಿಲೆಯ ಮೊಟ್ಟೆಗಳನ್ನು ನುಂಗಿ, ಗೂಡಿನಲ್ಲಿ ಹೆಣ್ಣು ಗೀಜಗದೊಂದಿಗೆ ಕುಳಿತಿತ್ತು. ಕೋಗಿಲೆ ಮತ್ತೆ ಅಳುತ್ತ, ಗಿಡದ ತುದಿ ಏರಿ ಕಣ್ಣೀರು ಹಾಕಿತು.

ಈ ಸಾರಿ ಕೋಗಿಲೆ ಮತ್ತೆ ಮೊಟ್ಟೆ ಇಟ್ಟಿತು. ಯಾರೇ ಬರಲಿ ಗೂಡು ಬಿಟ್ಟುಕೊಡಲಾರೆನೆಂದು ನಿರ್ಧರಿಸಿತು. ಅದೇ ವೇಳೆಗೆ ಮಳೆ ಸುರಿಯಿತು. ತೋಯಿಸಿಕೊಂಡ ಕರಿ ಕಾಗೆಯೊಂದು ನೊಂದವರ ನೋವು ನೊಂದವರೆ ಬಲ್ಲರು ಎನ್ನುತ್ತಾ 'ಮಳೆಯಲ್ಲಿ ಗೂಡು ಬಿದ್ದು ಹೋಗಿದೆ. ಮೊಟ್ಟೆ ಇಡಲು ಜಾಗ ಕೊಡು' ಎಂದು ಬೇಡಿತು. ಕೋಗಿಲೆ ಬೈದು ಜಾಗ ಕೊಡಲಾರೆನೆಂದು ಕಟ್ಟಿಗೆ ತುಂಡಿನಿಂದ ಬೀಸಿತು. ಕಾಗಕ್ಕನ ಕಣ್ಣಿಗೆ ಬಡಿದು ಕಾಗೆ ನೋವಿನಿಂದ ಹೊರಟು ಹೋಯಿತು. ಕೆಲವು ದಿನ ಹೀಗೆ ಕಳೆಯಿತು.

ಇನ್ನು ಯಾರ ಕಾಟವಿಲ್ಲವೆಂದ ಕೋಗಿಲೆ, ಆಹಾರಕ್ಕಾಗಿ ದೂರ ಹಾರಿ ಹೋಯಿತು. ಮಳೆ ಮತ್ತೆ ಶುರುವಾಯಿತು. ಕೋಗಿಲೆ ಮರಳಿ ತನ್ನ ಗೂಡಿಗೆ ಬಂದರೆ ಆಘಾತ. ಗೂಡಿನಲ್ಲಿ ನೀರು ನಿಂತಿದ್ದು ಗಾಳಿ ಮಳೆಗೆ ಗೂಡು ನೆಲ ಕಚ್ಚಿತ್ತು. ಮೊಟ್ಟೆಗಳು ಕಾಣುತ್ತಿಲ್ಲ. ಮೇಲೆ ನೋಡಿದರೆ ಕಾಗೆ ಜೋ... ಜೋ... ಜೋಗುಳ ಹಾಡುತ್ತಿದೆ. ಇದೆಲ್ಲ ಕಾಗಕ್ಕನ ಕೆಲಸ ಆಶ್ರಯ ಕೊಟ್ಟಿಲ್ಲವೆಂದು ನನ್ನ ಮೊಟ್ಟೆಗಳನ್ನು ನಾಶ ಮಾಡಿದ್ದಾಳೆ ಎಂದು ಬಂದು ನೋಡಿದರೆ ಆಶ್ಚರ್ಯ ಕಾಗಕ್ಕ ತನ್ನ ಮರಿಗಳೊಂದಿಗೆ ಕೋಗಿಲೆ ಮೊಟ್ಟೆಗಳಿಗೆ ಕಾವು ಕೊಡುತ್ತಿದ್ದಾಳೆ. ಕರಿ ಕಾಗೆ ಕೆಟ್ಟದೆಂದು ಹೊಡೆದು ಆಚೆ ತಳ್ಳಿ ಕಳಿಸಿದೆ. ಕಾಗಕ್ಕನ ಬಣ್ಣ ಕಪ್ಪು ಗುಣ ಚಿನ್ನ. ತಾನು ಇನ್ನು ಗೂಡು ಕಟ್ಟುವುದೇ ಬೇಡವೆಂದು ಕೋಗಿಲೆ ನಿರ್ಧರಿಸಿತು. ತನ್ನ ಮರಿಗಳಿಗೆ ತಾಯಿಯಾಗಿ ನನಗಿಂತ ಚಿಕ್ಕವ್ವಳಾಗಿ ಕಾಗಕ್ಕನೇ ಮೇಲು ಎಂದಳು. ಅಂದಿನಿಂದ ಗೂಡು ಕಟ್ಟುವುದನ್ನು ಬಿಟ್ಟು ತಾನೇ ಬಂದು ಕಾಗೆ ಗೂಡಲ್ಲಿ ಮೊಟ್ಟೆ ಇಟ್ಟಿತು. ಕಾಗೆ ಗೊತ್ತಿದ್ದರೂ, ಸಂತೋಷದಿಂದ ಕಾವು ಕೊಟ್ಟು ಮರಿ ಮಾಡಿತು. ಉಪಕಾರ ಸ್ಮರಿಸುವ ಕೋಗಿಲೆ ಈಗಲೂ ಚಿಕ್ಕವ್ವ ... ಚಿಕ್ಕವ್ವ... ಎಂದು ಕಾಗೆಗೆ ಧನ್ಯವಾದ ಹೇಳುತ್ತಿದೆ.

**ಲಲಿತಾ ಕೆ. ಹೊಸಪ್ಯಾಟಿ**




ಅಮ್ಮನ ಮಡಿಲು
ಅಪ್ಪನ ಹೆಗಲು
ಸ್ವರ್ಗಕ್ಕೂ ಮಿಗಿಲು
ಅಮ್ಮನ ತುತ್ತು
ಅಪ್ಪನ ಮುತ್ತು
ಅಮೃತಕ್ಕೂ ಮಿಗಿಲು

ಅಮ್ಮನ ಕನಸು
ಅಪ್ಪನ ಮನಸು
ಗಗನಕ್ಕೂ ಮಿಗಿಲು
ಅಮ್ಮನ ಆಸೆ
ಅಪ್ಪನ ಭಾಷೆ
ಜೀವಕ್ಕೂ ಮಿಗಿಲು

ಅಮ್ಮನ ನುಡಿಯು
ಅಪ್ಪನ ನಡೆಯು
ಸತ್ಯಕ್ಕೂ ಮಿಗಿಲು
ಅಮ್ಮನ ಪೂಜೆ
ಅಪ್ಪನ ಸೇವೆ
ದೈವಕ್ಕೂ ಮಿಗಿಲು

ಅಮ್ಮನ ತಾಳ್ಮೆ
ಅಪ್ಪನ ದುಡಿಮೆ
ದೀಪಕ್ಕೂ ಮಿಗಿಲು
ಅಮ್ಮನ ಪ್ರೀತಿ
ಅಪ್ಪನ ನೀತಿ
ಸರ್ವಕ್ಕೂ ಮಿಗಿಲು.

**ಸೋಮಲಿಂಗ ಬೇಡರ ಆಲೂರ**